ಓ ಎಸ್ ನಂ. 41/2019
ಪಿ ಡಬ್ಲ್ಯು 1
ದಿನಾಂಕ 06/03/2026 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ 1, 3 ರಿಂದ 5ನೇ ಪ್ರತಿವಾದಿಗಳ ಪರಃ ಶ್ರೀ ಬಿ ಆರ್ ಹೆಚ್ ವಕೀಲರಿಂದಃ

ನನ್ನ ತಂದೆಯ ತಂದೆ ಹೆಸರು ಹನುಮಂತಪ್ಪ. ನನ್ನ ಅಜ್ಜ ಹನುಮಂತಪ್ಪರವರಿಗೆ ಇಬ್ಬರು ಗಂಡು ಮಕ್ಕಳು ಮತ್ತು ಒಬ್ಬಳು ಹೆಣ್ಣು ಮಗಳು. ಅವರೆಂದರೆ 1. ಮೂರ್ತಿ 2. ರಾಮಚಂದ್ರಪ್ಪ 3. ರತ್ನಮ್ಮ. ನನ್ನ ತಂದೆ ಮೂರ್ತಿರವರು ಶಿಕ್ಷಕರಾಗಿದ್ದರು. ನನ್ನ ತಂದೆಯನ್ನು ಮೂರ್ತಿ ಮತ್ತು ಕೃಷ್ಣಮೂರ್ತಿ ಎಂಬ ಎರಡು ಹೆಸರುಗಳಿಂದ ಕರೆಯುತ್ತಿದ್ದರು. ನನ್ನ ತಂದೆಗೆ ನಾವು 4 ಜನ ಮಕ್ಕಳು. ಅವರೆಂದರೆ 1. ಭಾಗ್ಯವತಿಯಾದ ನಾನು 2. ಕಲಾವತಿ 3. ವಿಜಯಕುಮಾರ್ 4. ಲತಾ. ನನ್ನ ತಂದೆ ಮತ್ತು ಅವರ ಸಹೋದರರು ಭಾಗ ಆಗಿದ್ದಾರಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಯಾವ ಇಸವಿಯಲ್ಲಿ ಭಾಗ ಆಗಿದ್ದಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಪ್ರಸ್ತುತ ದಾವೆಯನ್ನು ಯಾವ ವಿಚಾರಕ್ಕೆ ಹೂಡಲಾಗಿದೆ ಎಂದರೆ ಸಾಕ್ಷಿ ಆಸ್ತಿಗಾಗಿ ಎಂದು ನುಡಿಯುತ್ತಾರೆ. ದಾವಾ ಆಸ್ತಿಗಳು ಯಾರ ಹೆಸರಿನಲ್ಲಿವೆ ಎಂದರೆ ಸಾಕ್ಷಿ ನನ್ನ ತಂದೆ ಹೆಸರಿನಲ್ಲಿವೆ ಎಂದು ನುಡಿಯುತ್ತಾರೆ. ಒಟ್ಟು 7 ಆಸ್ತಿಗಳಿಗೆ ಸಂಬಂದಪಟ್ಟಂತೆ ಪ್ರಸ್ತುತ

ದಾವೆ ಹೂಡಲಾಗಿರುತ್ತದೆ. ಎಲ್ಲಾ ಆಸ್ತಿಗಳು ನನ್ನ ತಂದೆ ಹೆಸರಿನಲ್ಲಿ ಇದ್ದಾವ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ನಿಪಿ-1 ರ ವಂಶವೃಕ್ಷವನ್ನು ಯಾರು ಹೇಳಿ ಬರೆಸಿರುತ್ತಾರೆ ಎಂದರೆ ಸಾಕ್ಷಿ ನಾನು ಮತ್ತು 2 ನೇ ವಾದಿ ಕಲಾವತಿರವರು ಒಟ್ಟಿಗೆ ಮಾಡಿಸಿರುತ್ತೇವೆ ಎಂದು ನುಡಿಯುತ್ತಾರೆ. ಸದರಿ ವಂಶವೃಕ್ಷಕ್ಕೆ ಅರ್ಜಿದಾರರಾಗಿ ನಾನೇ ಸಹಿ ಮಾಡಿರುತ್ತೇನೆ. 2 ನೇ ವಾದಿ ಕಲಾವತಿರವರು ಮುಸ್ಲಿಂ ಧರ್ಮಕ್ಕೆ ಮತಾಂತರಗೊಂಡಿರುತ್ತಾರಾ ಎಂದರೆ ಸಾಕ್ಷಿ ಅವರು ಮುಸ್ಲಿಂ ಧರ್ಮದ ಹುಡುಗನನ್ನು ಮದುವೆಯಾಗಿದ್ದು ಹಿಂದೂ ಮತ್ತು ಮುಸ್ಲಿಂ ಧರ್ಮದ ಎರಡು ಪದ್ಧತಿಗಳನ್ನು ಆಚರಿಸುತ್ತಾರೆ ಎಂದು ನುಡಿಯುತ್ತಾರೆ. 2 ನೇ ವಾದಿ ಕಲಾವತಿರವರ ಮತ್ತೊಂದು ಹೆಸರು ಏನು ಎಂದರೆ ಸಾಕ್ಷಿ ಆಯಿಷಾ ಎಂದು ನುಡಿಯುತ್ತಾರೆ. 1985 ರಲ್ಲಿ ನನ್ನ ವಿವಾಹ ಆಗಿರುತ್ತದೆ. ನನ್ನ ವಿವಾಹದ ಸಮಯದಲ್ಲಿ ನನ್ನ ತಂದೆ ಕೃಷ್ಣಮೂರ್ತಿರವರು ಬದುಕಿದ್ದರು. 2 ನೇ ವಾದಿ ಕಲಾವತಿರವರ ಮದುವೆ ಯಾವಾಗ ಆಗಿದೆ ಎಂದರೆ ಸಾಕ್ಷಿ ನನಗೆ ನಿಖರವಾಗಿ ಗೊತ್ತಿಲ್ಲ, ಆದರೆ ಅಂದಾಜು 1988 ರಲ್ಲಿ ಇರಬೇಕು ಎಂದು ನುಡಿಯುತ್ತಾರೆ. 2 ನೇ ವಾದಿಯ ಮದುವೆಯ ಕಾರ್ಯವನ್ನು ಯಾರು ನೆರವೇರಿಸಿರುತ್ತಾರೆ ಎಂದರೆ ಸಾಕ್ಷಿ 2 ನೇ ವಾದಿ ಇಷ್ಟಪಟ್ಟಂತೆ ನನ್ನ ತಂದೆ ತಾಯಿಯವರನ್ನು ಒಪ್ಪಿಸಿ ಮದುವೆ ಮಾಡಿಸಲಾಗಿರುತ್ತದೆ ಎಂದು ನುಡಿಯುತ್ತಾರೆ. 2 ನೇ ವಾದಿ ಅಜೀಮ್ ಎನ್ನುವವರನ್ನು

ಮದುವೆ ಆಗಿರುತ್ತಾರೆ. 2ನೇ ವಾದಿಯ ಮದುವೆಯನ್ನು ನನ್ನ ತಂದೆ ತಾಯಿ ನೆರವೇರಿಸಿರುವುದಿಲ್ಲ, ಅವರ ಇಷ್ಟದಂತೆ ಪ್ರೀತಿಸಿ ಮದುವೆಯಾಗಿ ಪ್ರತ್ಯೇಕವಾಗಿರುತ್ತಾರೆ ಎಂದರೆ ಸಾಕ್ಷಿ ನನ್ನ ತಂದೆ ತಾಯಿಯನ್ನು ಒಪ್ಪಿಸಿ ಕಡೂರಿನ ಕುಂತಿಹೊಳೆಯ ದೇವಾಲಯದಲ್ಲಿ ಮದುವೆ ಆಗಿರುತ್ತದೆ ಎಂದು ನುಡಿಯುತ್ತಾರೆ. 2ನೇ ವಾದಿ ಹಿಂದೂ ಸಂಪ್ರದಾಯದಂತೆ ಮದುವೆಯಾಗಿರುತ್ತಾರಾ ಅಥವಾ ಮುಸ್ಲಿಂ ಸಂಪ್ರದಾಯದಂತೆ ಮದುವೆಯಾಗಿರುತ್ತಾರಾ ಎಂದರೆ ಸಾಕ್ಷಿ ದೇವಾಲಯದಲ್ಲಿ ಹಿಂದೂ ಸಂಪ್ರದಾಯದಂತೆ ಮದುವೆಯಾಗಿರುತ್ತಾರೆ ಎಂದು ನುಡಿಯುತ್ತಾರೆ.

ನನ್ನ ತಂದೆ ಕೃಷ್ಣಮೂರ್ತಿರವರಿಗೆ 7 ಆಸ್ತಿಗಳು ಬಂದಿರುತ್ತವೆ. ಸದರಿ ಎಲ್ಲಾ ಆಸ್ತಿಗಳು ನನ್ನ ತಂದೆಗೆ ಪಿತ್ರಾರ್ಜಿತವಾಗಿ ಬಂದಿರುತ್ತವೆ. ನನ್ನ ಮದುವೆಯಾದ ನಂತರ ನಾನು ನನ್ನ ಗಂಡನ ಮನೆಯಲ್ಲಿ ವಾಸ ಇದ್ದೇನೆ ಎಂದರೆ ಸಾಕ್ಷಿ ನಾನು ನನ್ನ ತಾಯಿ ಮನೆಗೆ ಬಂದು ಹೋಗುವುದು ಮಾಡುತ್ತೇನೆ ಎಂದು ನುಡಿಯುತ್ತಾರೆ. ನನ್ನ ತಂದೆ ಕೃಷ್ಣಮೂರ್ತಿರವರು ಯಾವಾಗ ಮರಣ ಹೊಂದಿರುತ್ತಾರೆ ಎಂದರೆ ಸಾಕ್ಷಿ ನನಗೆ ನಿಖರವಾಗಿ ಗೊತ್ತಿಲ್ಲ, ಆದರೆ ಸುಮಾರು 20 ವರ್ಷಗಳಾಗಿವೆ ಎಂದು ನುಡಿಯುತ್ತಾರೆ. ನನ್ನ ತಂದೆ ಮರಣದ ನಂತರ ನನ್ನ ತಾಯಿ ಯಾರ ಜತೆ ವಾಸ ಇದ್ದರು ಎಂದರೆ ಸಾಕ್ಷಿ ನನ್ನ ತಮ್ಮ ವಿಜಯಕುಮಾರ್ ರವರ ಜತೆ ಇದ್ದರು ಎಂದು ನುಡಿಯುತ್ತಾರೆ. ನನ್ನ ತಮ್ಮ ವಿಜಯಕುಮಾರ್ ರವರು ಯಾವ ಕೆಲಸ

ಮಾಡುತ್ತಾರೆ ಎಂದರೆ ಸಾಕ್ಷಿ ಹೊಲಮನೆ ಕೆಲಸ ಎಂದು ನುಡಿಯುತ್ತಾರೆ. ಸದರಿ ವಿಜಯಕುಮಾರ್ ರವರು ಒಂದು ಫೈನಾನ್ಸ ನಡೆಸುತ್ತಿದ್ದಿದ್ದರು ಎಂದರೆ ಸಾಕ್ಷಿ ನನ್ನ ತಂದೆಯ ಕಾಲದಲ್ಲಿ ನಡೆಸುತ್ತಿದ್ದರು ಆದರೆ ಹೆಚ್ಚಾಗಿ ಹೊಲ ಮತ್ತು ತೋಟ ನೋಡಿಕೊಳ್ಳುತ್ತಿದ್ದರು ಎಂದು ನುಡಿಯುತ್ತಾರೆ. ಸದರಿ ವಿಜಯಕುಮಾರ್ ಈಗ ಬದುಕಿರುವುದಿಲ್ಲ. ಸದರಿ ವಿಜಯಕುಮಾರ್ ರವರಿಗೆ ಏನಾದರೂ ಕಾಯಿಲೆ ಇತ್ತ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ.

ಮುಂದುವರೆದ ಪಾಟೀ ಸವಾಲನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ, ಕಡೂರು.